ನಡೆಸಿದರೆ ಮಾತ್ರ ಹಾಗೆ ಬಿಡಿಸುವ ಇಬ್ಬರಿಗೂ ನ್ಯಾಯ ಒದಗಿಸಿದಂತೆ. ಗಂಡುಮಕ್ಕಳಿಗೂ ರಂಗೋಲಿ ಬಿಡಿಸುವ ಪೋಟಿ ಇಡುವವರಿಗೆ ನನ್ನದೇ ಮೊದಲ ಮೆಚ್ಚುಗೆ ಕಾದಿದೆ. 'ರಂಗೋಲಿ ಪೋಟಿ – ಗಂಡಸರಿಗೆ' ಇಂಥದ್ದೊಂದು ಆಗಿದ್ದರೆ ಅದನ್ನು ಮಾಡಿದವರಿಗೆ ಗೆಲ್ಲೆ ಮತ್ತು ಆಗಿರದಿದ್ದರೆ ಬೇಗ ಅದನ್ನು ನೆರವೇರಿಸಬೇಕೆಂದು ಉಳಗವನ್ನು (ಪ್ರಪಂಚ) ನಡೆಸುತ್ತಿರುವ ಕಸುವಿಗೆ ಕೈ ಮುಗಿದು ಬೇಡಿಕೊಳ್ಳುತ್ತಿದ್ದೇನೆ.

ಇತ್ತೀಚೆಗೆ ನಾನು ನೋಡಿದಾಗ ರಂಗೋಲಿ, ಅಂಟಿಕೆ (ಸ್ಟಿಕ್ಕರ್) ಮನೆಯ ಮುಂಬಾಗಿಲ ಮುಂದಿನ ಟೈಲ್ಸಿಗೆ, ದೇವರ ಮನೆಯೊಳಗೆ ಅಂಟಿಕೊಂಡಿತ್ತು, ಅದೂ ಚುಕ್ಕಿ ಇರದ ರಂಗೋಲಿ. ಚುಕ್ಕಿಗಳ ರಂಗೋಲಿಗಳಂತೂ ಅಂಟಿಗೆಗಳಲ್ಲಿ ಕಾಣಿಸಲೇ ಇಲ್ಲ ನನಗೆ. ಹರಿದು ಹೋಗುವವರೆಗೆ ಆ ಸ್ಟಿಕ್ಕರ್ರೇ ರಂಗೋಲಿ. ಅಂಗಳ ಕಳೆದುಕೊಂಡ ಮನೆ, ಹೊಸ್ತಿಲು ಕಳೆದು ಬಾಗಿಲುಗಳು, ಮಾಳಿಗೆ ಇಲ್ಲದ ಮನೆ, ಹೀಗೆ ಏನೇನೋ ಆಗಿರುವಾಗ ರಂಗೋಲಿಯು ಅಂಟಿಕೆಯಾಗಿ ಬದಲಾಗಿರುವುದರಲ್ಲಿ ತಪ್ಪಿಲ್ಲ.

ಮೊನ್ನೆ ಇನ್‌ಸ್ಟಾಗ್ರಾಮಿನಲ್ಲಿ ಹಬ್ಬಕ್ಕೆ ಬಳಸುವ ಪ್ಲಾಸ್ಟಿಕ್ ತೋರಣದಂತೆ ಪ್ಲಾಸ್ಟಿಕ್ ರಂಗೋಲಿಯೂ ಬಂದಿರುವುದು ಕಂಡು ಅಚ್ಚರಿಯಾಯಿತು. ಇಲ್ಲಿ ರಂಗೋಲಿ ಎಂದರೆ ಪುಡಿಯಲ್ಲ. ಕಾಲೊರೆಸುವ ಬಟ್ಟೆಗಳ ಅಳತೆಯಲ್ಲಿ ಕತ್ತರಿಸಿರುವ ಒಟ್ಟಾರೆ ರಂಗೋಲಿ ಚಿತ್ರದ ಬಿಡಿ ಬಿಡಿ ತುಂಡುಗಳು. ಎಲ್ಲವನ್ನೂ ಜೋಡಿಸಿದರೆ ಬಣ್ಣ ಬಣ್ಣಗಳ ರಂಗೋಲಿ ಮೂಡಿರುತ್ತದೆ. ನಾವು ಅದನ್ನು ಅಂಗಳಕ್ಕೆ ತಕ್ಕಂತೆ, ಮೂಲೆಗಳಿಗೆ ತಕ್ಕಂತೆ ಇಟ್ಟುಕೊಳ್ಳಬಹುದು. ಇನ್ನೂ ಕೆಲವರು ಈಗೀಗ ಬಗೆ ಬಗೆಯ ಮಂಡಲಗಳನ್ನು ಬಿಡಿಸಿ, ಬಣ್ಣ ತುಂಬಿ ಅವನ್ನು ರಂಗೋಲಿ ಎನ್ನುತ್ತಿದ್ದಾರೆ. ಮಂಡಲಗಳನ್ನು ರಂಗೋಲಿ ಅನ್ನಬೇಕೋ ಬಾರದೋ ಎನ್ನುವುದನ್ನು ಎರಡೂ ಕಡೆಯವರು ಕೂತು ಮಾತಾಡಿ ತೀರ್ಮಾನ ಮಾಡಿಕೊಳ್ಳಬೇಕು.

ವಾಟ್ಸಾಪ್ ಫಾರ್ವರ್ಡ್‌ನಲ್ಲಿ ತಿಟ್ಟದೊಂದಿಗೆ (ಫೋಟೊ) ಓದಿದ ಸುದ್ದಿಯೊಂದು, ಹಿಂದೆಯೂ ಹೀಗೆ ಮಾಡುತ್ತಿದ್ದರು ಎಂಬುವ ಪಾಡನ್ನು ನನಗೆ ಬಹಳ ತಡವಾಗಿ ತಿಳಿಸಿತ್ತು. ಅದೇನೆಂದರೆ, ಹಿಂದಿನ ಕಾಲದಲ್ಲಿ ರಂಗೋಲಿಯನ್ನು ಅಕ್ಕಿಯ ಹಿಟ್ಟಿನಿಂದ ಹಾಕುತ್ತಿದ್ದರು ಎಂಬುದು. ಇದರಿಂದ ಒಂದಷ್ಟು ಹೊತ್ತು ಮನೆಯ ಅಂಗಳದ ಅಂದಚೆಂದವನ್ನು ಹೆಚ್ಚಿಸಿದ ರಂಗೋಲಿಯು, ಮನೆಯ ಸುತ್ತಲೂ ಆಗ ಇರುತ್ತಿದ್ದ ಬಾನಾಡಿಗಳ ಅರಿದಾಗಿ ಗುಬ್ಬಿಗಳ ಹೊಟ್ಟೆಯನ್ನು ತುಂಬಿಸಿ ನೆಮ್ಮದಿ ಕಾಣುತ್ತಿತ್ತು ಎನ್ನುವುದು. ಇದು ಎಷ್ಟು ದಿಟವೋ ಗೊತ್ತಿಲ್ಲ. ಯಾಕೆಂದರೆ ಕೂಡಣಕೂಟಗಳು (ಸೋಷಿಯಲ್ ಮೀಡಿಯಾ) ಹೇಳುವುದನ್ನು ಸುಮ್ಮನೇ ನಂಬಿ ಬಿಡಬಾರದು ಎನ್ನುವ ಅರಿವು ನನಗಿದೆ. ಆದರೆ ಈ ಸುದ್ದಿಯು ಮಾನವರಾಗಿ ನಾವು, ನಮ್ಮ ನಲಿವಲ್ಲಿ ಬೇರೆಯ ಉಸಿರಿಗಳನ್ನು ಪಾಲುದಾರರನ್ನಾಗಿ ಮಾಡಿಕೊಳ್ಳುವ ನಡೆ ಇರುವುದು ನನಗೆ ತುಂಬಾ ಹಿಡಿಸಿತು. ಮನುಷ್ಯ ಹೀಗೆಯೇ ಬದುಕಬೇಕು ಎಲ್ಲರೊಂದಿಗೆ. 'ಜೀವ ಜೀವ ಸೇರಿಸೋ ಒಲವೇ



ರಂಗೋಲಿ' ಎಂಬ ಕನ್ನಡದ 'ರಂಗೋಲಿ' ಸಿನಿಮಾದ ಹಾಡಿನ ಸಾಲಲ್ಲಿ ಒಲವನ್ನು ರಂಗೋಲಿ ಎಂದು ಹೊಗಳಿದ್ದರೆ, ಇಲ್ಲಿ ದಿಟ ಬದುಕಿನಲ್ಲಿ ರಂಗೋಲಿಯೇ ಒಲವಿನ ಮೂಲವಾಗಿದೆ. ಅಕ್ಕಿ ರಂಗೋಲಿ ಎಂಬ ಒಲವಿಗೆ ಎದೆ ತುಂಬಿದ ಶರಣು.

ಹೊಳೆಗಳ ಉಸುಗನ್ನು (ಮರಳು) ಕಟ್ಟಡಗಳಿಗೆ ಬಳಸುವುದನ್ನು ನಿಲ್ಲಿಸುವಂತೆ ಆಳ್ವಿಕೆಯವರು ಅಪ್ಪಣೆ ಕೊಟ್ಟ ಮೇಲೆ ಉಸುಗಿನ ಎಡೆಗೆ ಸೈಜುಗಲ್ಲಿನ ನುಣುಪಾದ ಪುಡಿ ಬಂದಿದೆ. ಈ ಸುದ್ದಿ ಗೊತ್ತಿಲ್ಲದೇ ಒಂದು ಲಾರಿಯಷ್ಟು ತುಸು ಬೆಳ್ಳನೆಯ ಪುಡಿಯನ್ನು ಕಟ್ಟುತ್ತಿದ್ದ ಮನೆಯೊಂದರ ಮುಂದೆ ಮೊದಲ ಸಲ ಬೆಂಗಳೂರಿನಲ್ಲಿ ನೋಡಿದಾಗ ನನಗೆ ಅಚ್ಚರಿಯಾಗಿತ್ತು. ಇಷ್ಟೊಂದು ರಂಗೋಲಿಯನ್ನು ಏನು ಮಾಡುತ್ತಾರೆ? ಸುಮ್ಮನೇ ನೆನೆಯುತ್ತಿದೆ ಪುಡಿ, ರಂಗೋಲಿ ಬಿಡಿಸುವಾಗ ಬಹಳ ಕಷ್ಟವಾಗುತ್ತದೆ, ಇನ್ನೂ ಬೆಳ್ಳಗಿರಬೇಕಿತ್ತು, ಅಮ್ಮ ನೋಡಿದ್ರೆ ಬೈತಿದ್ರು, ಯಾರೂ ಕದಿಯುವುದಿಲ್ಲವೇ... ಹೀಗೆ ಏನೇನೋ ಮೂಡಿದ್ದವು ತಲೆಯಲ್ಲಿ. ಕಟ್ಟಳೆ ಗೊತ್ತಾದ ಮೇಲೆ ತಲೆ ಕೇಳ್ವಿಗಳ ಕೇಳಲಿಲ್ಲ.

ನಾನಿರುವ ಬೆಂಗಳೂರಿನ ವಿಜಯನಗರ, ಅದರಲ್ಲೂ ಮಾರೇನಹಳ್ಳಿಯು ಇನ್ನೂ ತನ್ನ ಅಂಗಳದಲ್ಲಿ ರಂಗೋಲಿಗಳನ್ನು ಇಟ್ಟುಕೊಳ್ಳುವ ಮನೆಗಳನ್ನು ಕಳೆದುಕೊಂಡಿಲ್ಲ. ಕೆಲವು ಮನೆಗಳು ಕೆಮ್ಮಣ್ಣಿನಂತಹ ಬಣ್ಣದ ಪುಡಿಯನ್ನೂ ಬಿಳಿಯೊಂದಿಗೆ ರಂಗೋಲಿಯನ್ನು ಮೂಡಿಸಿ, ಕಳೆ ಹೆಚ್ಚಿಸುತ್ತಿವೆ. ಎರಡು ಬಣ್ಣಗಳ ರಂಗೋಲಿಗಳನ್ನು ಬೆಂಗಳೂರಿನ ಬಹಳಷ್ಟು ಕಡೆ ಕಂಡಿದ್ದೇನೆ. ನಮ್ಮ ವಿಜಯನಗರದಲ್ಲಿ ಈಗಲೂ ಹದಿನೈದು ದಿನಗಳಿಗೊಮ್ಮೆಯಾದರೂ ಹಳೆಯದೊಂದು ಟಿವಿಎಸ್ ಎಕ್ಸೆಲ್ ಗಾಡಿ ಹತ್ತಿಕೊಂಡು ಹೆಂಗಸೊಬ್ಬಳು ಬೀದಿ ಬೀದಿಯಲ್ಲಿ ತಡೆ ತಡೆದು ಹೋಗುತ್ತಾ, 'ರಂಗೋಲಿ, ರಂಗೋಲಿ. ವೈಟ್ ರಂಗೋಲಿ. ಇಪ್ಪತ್ರೂಪಾಯಿಗೊಂದು. ಐವತ್ರುಪಾಯಿಗೆ ಮೂರು. ರಂಗೋಲಿ ರಂಗೋಲಿ' ಎನ್ನುವ ಮೊದಲೇ ರೆಕಾರ್ಡ್ ಆಗಿರುವ ಉಲಿಯನ್ನು ಎಲ್ಲರಿಗೂ ಕೇಳಿಸುತ್ತಾ, ಮಾರುತ್ತಾ ಹೋಗುವುದನ್ನು ಕೇಳಿದಾಗ ಉಸಿರಿಗೆ ಎಳೆತನದ ಕಂಪು ಬಡಿದು, ನನ್ನೆದೆ ನಲಿಯುತ್ತದೆ.

ದೊಡ್ಡ ಊರುಗಳು ಬಾನಾಡಿಗಳಂತೆ ಹಾರುತ್ತಾ ಮೇಲಿಂದ ನೋಡುವವರಿಗೆ ಬದಲಾದಂತೆ, ಬೋಳಾದಂತೆ ಇಲ್ಲವೇ ಹೊಸತರಿಂದ ತುಂಬಿಕೊಂಡಂತೆ ಕಾಣಬಹುದು. ಆದರೆ ನಾವು ಮರೆಯಬಾರದ್ದು ಏನೆಂದರೆ, ದೊಡ್ಡ ಊರಲ್ಲೂ ಕೂಡ ನೆಲಕ್ಕೆ ಹತ್ತಿರವಾಗಿ ಓಡಾಡುವವರಿಗೆ ಯಾವುದೋ ಮನೆಯ ಮುಂದೆ ಅರಳಿ ನಗುತ್ತಿರುವ ರಂಗೋಲಿಯಂತಹ ಪುಟ್ಟ ಪುರುಳು, ಟಕ್ಕನೇ ಎಳೆತನವನ್ನು, ಮನೆಯ ನೆನಪನ್ನು, ನನಗೆ ಆಗುವಂತೆ ಅಮ್ಮನ ನೆನಪನ್ನು ತಂದು ಆ ಗಳಿಗೆಗೆ ಎದೆಗೆ ಅಮೃತ ಉಣಿಸಿ ಇಡೀ ನಾಳಿಗೆ ಕಸುವು ತುಂಬಬಲ್ಲದು ಎನ್ನುವುದನ್ನ.

6

ಅಪ್ಪ ತೀರಿ ಹೋದ ಕೆಲವು ನಾಳುಗಳಲ್ಲಿ ತೀರಿದವರ ದಿವ್ಸ ಮಾಡುವ ಹೊತ್ತಿನಲ್ಲಿ ನನ್ನ ಬರೆಕಟ್ಟು ಎಂದು ಗೊತ್ತಿಲ್ಲದೇ ಯಾರೋ ಬಿಡಿಸಿ, ಇಡೀಯಾಗಿ ಮುಗಿಸದೇ ಬಿಡಿಸಿದ್ದ, ಉಳಿಸಿದ್ದ ಎಷ್ಟೋ ಚುಕ್ಕಿಗಳ ರಂಗೋಲಿಯ ಚಿತ್ರವನ್ನು ಕಂಡು ಟಕ್ಕನೇ ಅಮ್ಮನ ಮೋರೆ ಕಣ್ಮುಂದೆ ಬಂದಂತಾಗಿ ಏನೋ ಕಳವಳ, ತಳಮಳ ಮೂಡಿದ್ದು ಇನ್ನೂ ನೆನಪಿದೆ ನನಗೆ. ಆದರೆ ಅದು ಅಮ್ಮ ಬಿಡಿಸಿದ್ದಲ್ಲ ಎನ್ನುವುದು ಅದರ ಅಂದಚಂದಗಳಿಂದ ಮರುಗಳಿಗೆಯೇ ಅರಿವಾದೊಡನೆ, ನೆಮ್ಮದಿಯೋ ಸಂಕಟವೋ ಆ ಗಳಿಗೆ ಮೂಡಿ ಮರೆಯಾಗಿದ್ದನ್ನು ಏನೆನ್ನಬೇಕು?

ಅಪ್ಪ ತೀರಿ ಹತ್ತು ಏಡುಗಳಾಗುತ್ತಾ ಬಂದಿವೆ. ಈಗಲೂ ನಾವು ಇರುವುದು ಬಳ್ಳಾರಿಯ ಪೊಳಲಿನ ಅದೇ ಪೊಲೀಸ್ ಕ್ವಾರ್ಟ್ರಸ್ಸು. ಅಪ್ಪನ ಕೆಲಸವೀಗ ಸಣ್ಣ ತಮ್ಮನಿಗೆ ಬಂದು, ತಮ್ಮನ ಹೆಸರಲ್ಲಿ ಹೊಸ ಮನೆ ಸೇರಿದ್ದೇವೆ. ಆದರೆ ಹೊಸ ಮನೆಯು, ಮೂರಂತಸ್ತಿನ ಕಟ್ಟಡದ ಮೊದಲ ಮಹಡಿಯಲ್ಲಿದೆ! ಅಂಗಳವಿಲ್ಲ. ಅಲ್ಲಿಗೆ ಎಲ್ಲವೂ ಮುಗಿಯಿತು?!

ಇಲ್ಲ, ಮುಗಿದಿಲ್ಲ. ನಾನು ಈಗಲೂ ಊರಿಗೆ ಮನೆಗೆ ಹೋದ ಎಲ್ಲಾ ಸಲ ಮುಂಬಾಗಿಲ ಪಕ್ಕದ ಕಿಟಕಿಯ ಮೂಲೆಯಲ್ಲಿರುವ ರಂಗೋಲಿ ಪುಡಿ ಡಬ್ಬಿಯು ನಗು ನಗುತ್ತಾ ನನ್ನನ್ನು ಬರ ಮಾಡಿಕೊಳ್ಳುತ್ತಿದೆ. ಅಮ್ಮ ಎಲ್ಲಾ ನಾಳೂ ಬಾಗಿಲ ಮುಂದೆ, ಕಬ್ಬಿಣದ ತಡಿಕೆಯ (ಗೇಟ್) ಮುಂದಿನ ಕಲ್ಲುಗಳ ಮೇಲೆಯೇ ಬಗೆ ಬಗೆಯ ಚುಕ್ಕಿ ರಂಗೋಲಿಗಳನ್ನು ಹಾಕುತ್ತಿದ್ದಾಳೆ. ಅವಳು ಬಿಡಿಸಿದ ರಂಗೋಲಿಗಳಲ್ಲಿ ಅವಳ ಮೂರೂ ಮಕ್ಕಳ ಬದುಕು ಅರಳುತ್ತಿದೆ. ಮೂಡಿದ ರಂಗೋಲಿ, ಮಕ್ಕಳ ಉಸಿರಿಗೆ ನೆಮ್ಮದಿ ತುಂಬುತ್ತಿದೆ. ಆ ನೆಮ್ಮದಿಯೇ ಈ ಪ್ರಬಂಧವನ್ನು ಬರೆಸುತ್ತಿದೆ.

7

ಬೆಂಗಳೂರಿನ ಒಂದು ನಸುಕು, ಮನೆಯ ಮುಂಬಾಗಿಲ ಮುಂದೆ ದೊಡ್ಡ ಅಂಗಳವಿರುವ ಮಣ್ಣಿನ ನೆಲ, ನೆಲವನ್ನು ಗುಡಿಸಿ, ನೀರು ಬಡಿಸಿ ತಂಪಾಗಿಸಲಾಗಿದೆ. ಬಾನಾಡಿಗಳ ಬಾಯಿಗೆ ಸಿಗುವಷ್ಟೇ ಚೂರು ದಪ್ಪನೆಯ ಬಿಳಿ ಬಿಳಿಯಾದ ಅಕ್ಕಿಯ ನುಚ್ಚಿನಿಂದ, ಏಳು ಚುಕ್ಕಿಯ ರಂಗೋಲಿ ಬಿಡಿಸುವುದನ್ನು ನಗು ನಗುತ್ತಾ ನಾನು, ನನ್ನ ಹೆಂಡತಿಗೆ ಕಲಿಸುತ್ತಿದ್ದೇನೆ. ಅವಳ ಕಂಗಳಲ್ಲಿ ರಂಗೋಲಿಯ ವಯ್ಯಾರದ ಸೊಡರಿನಲ್ಲಿದ್ದ ಬೆಳಕು ಮಿನುಗುತ್ತಿದೆ. ಮನೆಯ ಬಾಗಿಲ ಮುಂದೆ ನಿಂತು ನಮ್ಮಿಬ್ಬರನ್ನು ನೋಡಿ, ಅಮ್ಮ ನೆಮ್ಮದಿಯಿಂದ ನಸು ನಗುತ್ತಿದ್ದಾಳೆ.

ಇದು ಈ ಪ್ರಬಂಧವನ್ನು ಬರೆದು ತಿದ್ದುವ ನಾಳುಗಳಲ್ಲಿ ನಾನು ನನಗಾಗಿ ಕಟ್ಟಿಕೊಂಡ ಕನಸು. ಒಳ್ಳೆಯ ಕನಸುಗಳು ನನಸಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in